(ಸಭೆಯು ಮಧ್ಯಾಹ್ನ ೧-೦೦ ಗಂಟೆಗೆ ಪುನಃ ಸೇರಿತು)

(ಶ್ರೀ ಎನ್. ಹುಚ್ಚಮಾಸ್ತಿಗೌಡ್ರಅವರು ಪೀಠವನ್ನಲಂಕರಿಸಿದರು).

ಒಬ್ಬ ಮಾನ್ಯ ಸದಸ್ಯರು.—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸರ್ಕಾರ ಬದಲಾವಣೆಯಾಗಿದೆ. ದೇಶದ ಬೆನ್ನೆಲುಬಾಗಿರತಕ್ಕ ರೈತರು ಹಿಂದಿನ ಸರ್ಕಾರದ ಗುಂಡೇಟಿಗೆ ಬಲಿಯಾಗಿರುವುದರಿಂದ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾದ್ದು ನಮ್ಮ ಮೊದಲ ಕರ್ತವ್ಯ.

ಅಧ್ಯಕ್ಷರು. —ಈ ಸಭೆ ಸದಸ್ಯರ ಸಿಟ್ಟಿಂಗ್ ಏಜೆನ್ಸಿಯೇ ಅಲ್ಲ, ಪ್ರತಿಜ್ಞೆ ತೆಗೆದುಕೊಳ್ಳುವುದಕ್ಕೆ ಮಾತ್ರ ಇರತಕ್ಕುದು. ಉಳಿದ ವಿಚಾರಗಳನ್ನು ಸಭೆಯು ಸೇರಿದಾಗ ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ, ಹಿಂದಿನ ಸರ್ಕಾರದ ಗುಂಡೇಟಿಗೆ ರೈತರು ಬಲಿಯಾಗಿದ್ದಾರೆಂದು ಆಡಳಿತ ಪಕ್ಷದ ಸದಸ್ಯರೊಬ್ಬರು ಏನು ಹೇಳುತ್ತಿದ್ದಾರೆ ಆ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರ ಚುನಾವಣೆ

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ಮುಂದಿನ ಕಾರ್ಯಕ್ರಮ, ಅಧ್ಯಕ್ಷರನ್ನು ಚುನಾಯಿಸುವುದು. ಅಧ್ಯಕ್ಷ ಸ್ಥಾನಕ್ಕೆ ಇಬ್ಬರ ಹೆಸರುಗಳನ್ನು ಸೂಚಿಸಿರತಕ್ಕ ನಾಲ್ಕು ಪ್ರಸ್ತಾವಗಳು ಬಂದಿವೆ. ಕಾರ್ಯಕ್ರಮದ ಪಟ್ಟಿಯಲ್ಲಿರುವ ಕ್ರಮದಲ್ಲಿಯೇ ಅವರವರ ಹೆಸರಿನಲ್ಲಿರತಕ್ಕ ಪ್ರಸ್ತಾವಗಳನ್ನು ಸೂಚಿಸಲು ಸೂಚಕರ ಹೆಸರುಗಳನ್ನು ಕರೆಯುತ್ತೇನೆ. ಎಲ್ಲ ಪ್ರಸ್ತಾವಗಳನ್ನೂ ಸೂಚಿಸಿ ಅವುಗಳನ್ನು ಅನುಮೋದಿಸಿದ ನಂತರ, ಯಾವ ಕ್ರಮದಲ್ಲಿ ಸೂಚಿಸಲಾಗಿದೆಯೋ ಅದೇ ಕ್ರಮದಲ್ಲಿ ಪ್ರಸ್ತಾವಗಳನ್ನು ಸಭೆಯ ಮಂತಕ್ಕೆ ಹಾಕುತ್ತೇನೆ. ಮೊದಲನೆಯ ಪ್ರಸ್ತಾವ ಅಂಗೀಕಾರವಾದಲ್ಲಿ, ಇತರ ಪ್ರಸ್ತಾವಗಳನ್ನು ಮತಕ್ಕೆ ಹಾಕುವುದಿಲ್ಲ.

ಈಗ ಶ್ರೀ ಜೆ. ಹೆಚ್. ಪಟೇಲ್‌ರವರ ಹೆಸರಿನಲ್ಲಿರುವ ಪ್ರಸ್ತಾವನ್ನು ಸೂಚಿಸುವಂತೆ ಕೋರಿ, ಪ್ರಸ್ತಾವನ್ನು ಅನುಮೋದಿಸುವಂತೆ ಶ್ರೀ ಆರ್.ಎಲ್. ಜಾಲಪ್ಪ ಅವರನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ಪ್ರಸ್ತಾವನ್ನು ತಾವು ಸಭೆಯ ಅಂಗೀಕಾರಕ್ಕೆ ಸೂಚನೆ ಮಾಡುವ ಮೊದಲು ಇದಕ್ಕೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ನಾನು ಹೇಳಬೇಕೆಂದಿದ್ದೇನೆ. ಇವೊತ್ತು ಸಭಾಧ್ಯಕ್ಷರ ಚುನಾವಣೆ ವಿಚಾರದಲ್ಲಿ ಇಬ್ಬರ ನಾಮಪತ್ರ ಇಲ್ಲಿ ಸಲ್ಲಿಕೆಯಾಗಿದೆ. ಮೊದಲನೆಯದಾಗಿ ಸನ್ಮಾನ್ಯ ಜೆ.ಹೆಚ್. ಪಟೇಲ್ ಅವರು ಸನ್ಮಾನ್ಯ ಡಿ. ಬಿ. ಚಂದ್ರೇಗೌಡರ ಹೆಸರನ್ನು ಸೂಚನೆ ಮಾಡಿದ್ದಾರೆ. ಇನ್ನು ಎರಡನೆಯದಾಗಿ ಸನ್ಮಾನ್ಯ ಧರ್ಮಸಿಂಗ್ ಅವರು ಶ್ರೀಮತಿ ನಾಗರತ್ನಮ್ಮ ಅವರ ಹೆಸರನ್ನು ಸೂಚನೆ ಮಾಡಿದ್ದಾರೆ: ಇದು ತಪ್ಪುಗೆಲ್ಲಿಂಗ್ ಗೊತ್ತಿದೆ. ವಿಧಾನಸಭೆಯು ಅಧ್ಯಕ್ಷ ಸ್ಥಾನ ಬಹಳ ಪವಿತ್ರವಾದಂಥ ಸ್ಥಾನ. ಈ ಸ್ಥಾನವನ್ನು ಅಲಂಕರಿಸತಕ್ಕ ವ್ಯಕ್ತಿ ಇಡೀ ಸಭೆಗೆ ಭೂಷಣ ಪ್ರಾಯರಾಗುತ್ತಾರೆ. ಅವರು ಇಡೀ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಐದು ವರ್ಷಗಳ ಕಾಲ ಸಭೆಯನ್ನು ನಡೆಸಬೇಕಾಗುತ್ತದೆ. ಅಲ್ಲದೇ ಯಾವುದೇ ರೀತಿಯ ಪಕ್ಷ ಭೇದಭಾವನೆ ಇಲ್ಲದೇ ಜನರ ವಿಶ್ವಾಸಗಳಿಸಂವುದು ಮಾತ್ರವೇ ಅಲ್ಲ, ಈ ಸದನದ ಸದಸ್ಯರ ವಿಶ್ವಾಸಗಳಿಸುವುದು ಮಾತ್ರವೇ ಅಲ್ಲ. ಸಂವಿಧಾನದಲ್ಲಿ ಏನನ್ನು ಸಾಧನೆ ಮಾಡಬೇಕೆಂದು ನಿರ್ದೇಶಿಸಿದ್ದಾರೆ ಅವನ್ನು ಅನುಷ್ಠಾನಕ್ಕೆ ತರಬೇಕಾದುಂಥ ಕರ್ತವ್ಯವನ್ನು ಅವರು ಮಾಡಬೇಕಾಗುತ್ತದೆ. ನಮ್ಮ ಈ ಸದನದ ಪರಂಪರೆ, ಯಾವಾಗಲೂ ಕೂಡ ವಿಧಾನಸಭೆಗಳ ಪರಂಪರೆ ಪ್ರಕಾರ ಸರ್ವಾನುಮತದಿಂದ ಸಭಾಧ್ಯಕ್ಷರ ಚುನಾವಣೆ ಆದರೆ, ಅದರಿಂದ ಹೆಚ್ಚು ಫಲಪ್ರದವಾಗುತ್ತದೆ. ಯಾವ ಪವಿತ್ರ ಧ್ಯೇಯಗಳನ್ನು ನಮ್ಮ ಮುಂದಿಟ್ಟುಕೊಂಡು ನಮ್ಮ ಕಾರ್ಯವನ್ನು ನಿರ್ವಹಿಸಬೇಕು ಅದು ಅದರಿಂದ ಸಾಧನೆಯಾಗುತ್ತದೆ. ನಮ್ಮ ಕಡೆಯಿಂದ ಶ್ರೀಮತಿ ನಾಗರತ್ನಮ್ಮ ಅವರ ಹೆಸರನ್ನು ಈ ಒಂದು

ಸಭಾಧ್ಯಕ್ಷರ ಸ್ಥಾನಕ್ಕೆ ಸೂಚನೆ ಮಾಡಿದಾಗ ನಮ್ಮ ಉದ್ದೇಶ ಇಷ್ಟೆ. ಅದು ಹೌಸ್ ಆಫ್ ಕಾಮನ್ ಇರಬಹುದು ಅಥವಾ ಬೇರೆ ಬೇರೆ ನಾವು ನಡೆಸಿಕೊಂಡು ಬಂದಂಥ ಅನೇಕ ಪರಂಪರೆಗಳು ಇರಬಹುದು. ಅದರ ಹಿನ್ನೆಲೆಯನ್ನು ನೋಡಿದರೆ ಹಿಂದೆ ಈ ಸಭಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿದಂಥ ವ್ಯಕ್ತಿ ಅವರಾಗಿದ್ದರು. ಸಾಮಾನ್ಯವಾಗಿ ಚುನಾವಣೆ ನಡೆದಾಗ ಯಾವುದೇ ವಿರೋಧ ಪಕ್ಷಗಳು ಆ ಸ್ಥಾನಕ್ಕೆ ಸ್ಪರ್ಧೆ ಮಾಡುವುದಿಲ್ಲ. ಆ ಪರಂಪರೆಯನ್ನು ನಮ್ಮ ಈಗ ಆಡಳಿತ ಪಕ್ಷವಾಗಿರತಕ್ಕಂಥ ಜನತಾ ಪಕ್ಷದವರು ಕೂಡ ೧೯೭೮ನೇ ಇಸವಿಯಲ್ಲಿ ಅನುಸರಿಸಿದರು. ಬಹುಶಃ ಸನ್ಮಾನ್ಯ ದೇವೇಗೌಡರು ಆಗ ಆ ಪಕ್ಷದ ಅಧ್ಯಕ್ಷರಾಗಿದ್ದಿರಬಹುದು ಅಂಥ ನೆನಪು. ಆಗ ಶ್ರೀಮತಿ ನಾಗರತ್ನಮ್ಮ ಅವರು ಸಭಾಧ್ಯಕ್ಷರಾಗಿದ್ದರು, ಅವರು ಸ್ಪರ್ಧೆ ಕೊಟ್ಟಾಗ ಜನತಾ ಪಕ್ಷದವರು ಅವರಿಗೆ ವಿರುದ್ಧವಾಗಿ ಸ್ಪರ್ಧೆ ಮಾಡಲಿಲ್ಲ. ಆದ್ದರಿಂದ, ಈ ಸಿದ್ಧಾಂತದ ಸ್ವರೂಪವನ್ನು ನೋಡಿದರೆ, ಜನತಾ ಪಕ್ಷದವರು ಈ ಸಿದ್ಧಾಂತದಲ್ಲಿ ಒಂದು ತತ್ವವನ್ನು ಇಟ್ಟುಕೊಂಡು ೧೯೭೮ರಲ್ಲಿ ಅವರು ವಿರೋಧ ಪಕ್ಷದಲ್ಲಿರುವಾಗ ಈ ಪರಂಪರೆಯನ್ನು ಅನುಸರಿಸಿಕೊಂಡು ಸ್ಪರ್ಧೆಯನ್ನು ಕೊಡಲಿಲ್ಲ. ತಾವು ಏನು ಒಂದು ಪರಂಪರೆಯನ್ನು ೧೯೭೮ನೇ ಇಸವಿಯಲ್ಲಿ ಅನುಸರಣೆ ಮಾಡಿ, ಪ್ರಜಾಪ್ರಭುತ್ವದ ವಿಧಿಗನ್ನಯವಾಗಿ ಅನುಸರಿಸಿಕೊಂಡು ಬರಲಾಗಿದೆ ಅದನ್ನು ನಾವು ನೆನಪಿಟ್ಟುಕೊಳ್ಳುತ್ತೇವೆ. ಶ್ರೀಮತಿ ನಾಗರತ್ನಮ್ಮ ಅವರು ಹಿಂದೆ ಈ ಸಭೆಯಲ್ಲಿ ನಿಷ್ಪಕ್ಷಪಾತವಾಗಿ ಕಾರ್ಯಕ್ರಮಗಳನ್ನು ನೆನಸಿಕೊಂಡು ಬಂದ ಉಜ್ವಲ ವಿಶ್ವಾಸವಿದ್ದುದರಿಂದ ಈ ಸದನ ಅದರ ಬಗ್ಗೆ ಸ್ವೀಕಾರ ಮಾಡುತ್ತದೆ ಎನ್ನುವ ಒಂದು ವಿಶ್ವಾಸದಿಂದ ಶ್ರೀಮತಿ ನಾಗರತ್ನಮ್ಮ ಅವರ ಹೆಸರನ್ನು ನಮೂದಿಸಿದ್ದೆವು ಆದರೆ ಈ ಬಗ್ಗೆ ತಾವು ಇಲ್ಲಿ ಶ್ರೀಮಾನ್ ಡಿ. ಬಿ. ಚಂದ್ರೇಗೌಡರ ಹೆಸರನ್ನು ಸೂಚನೆ ಮಾಡಿದ್ದೀರಿ. ನಾವು ಕೂಡ ಇದರ ಬಗ್ಗೆ ಈಗಾಗಲೇ ವಿಚಾರ ಮಾಡಿದ್ದೇವೆ. ಅವಿರೋಧವಾಗಿ ಸಭಾಧ್ಯಕ್ಷರ ಆಯ್ಕೆ ಆಗಬೇಕಾದಂಥ ಪರಂಪರೆ ಒಪ್ಪಿಕೊಂಡು ಬಂದಂಥ ವಿಚಾರ. ಆದ್ದರಿಂದ ಇಂಥ ಒಂದು ಪರಂಪರೆಯನ್ನು ಮುಂದಿಯಲಿಕ್ಕೆ ನಮಗೆ ಸರ್ವಥಾ ಇಚ್ಛೆ ಇಲ್ಲ. ಅವಿರೋಧವಾಗಿ ಸಭಾಧ್ಯಕ್ಷರ ಆಯ್ಕೆಯಾಗಬೇಕು, ಮುಂದೆ ಕೂಡ ಇಂಥ ಒಂದು ಒಳ್ಳೆಯ ಪರಂಪರೆ ಬೆಳೆಸಿಕೊಂಡು ಬರಬೇಕಾಗಿಗೆ ಎನ್ನುವ ಆಸೆಯನ್ನು ವ್ಯಕ್ತಪಡಿಸಿ ನಾವು ಈ ಬಗ್ಗೆ ಸ್ಪರ್ಧೆಯನ್ನು ಕೊಡಲಿಕ್ಕೆ ತಗಾರಿಲ್ಲ, ಸಭಾಧ್ಯಕ್ಷರ ಆಯ್ಕೆ ಅವಿರೋಧವಾಗಿ ಮಾಡತಕ್ಕ ಉಜ್ವಲ ಪರಂಪರೆ ಬೆಳೆಯಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು —ಮಾನ್ಯ ಎದುರುಪಕ್ಷದ ನಾಯಕರು ಹೇಳಿರತಕ್ಕ ವಿಷಯ ಈ ಸಭೆ ಸೇರುವುದಕ್ಕೆ ಮುಂಚೆ ಆಡಳಿತ ಪಕ್ಷದ ನಾಯಕರ ಜೊತೆ ವಿರೋಧ ಪಕ್ಷದವರು ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದರೆ ಚೆನ್ನಾಗಿತ್ತು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಯಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ. - ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ಇಂದು ಬೆಳಿಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು, ಮತ್ತು ಈ ಸದನದ ನಾಯಕರು ನಮ್ಮನ್ನು ಕರೆದಿದ್ದರು. ಅಲ್ಲಿ ಮಾತು ಕತೆ ಈ ವಿಚಾರದಲ್ಲಿ ಮಾಡಿದ್ದೇವೆ, ಆದರೂ ಇಲ್ಲಿ ಪಿತಕ್ಕೆ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದರೆ ಅಲ್ಲಿ ಯಾವ ರೀತಿ ಒಪ್ಪಂದವಾಯಿತು, ಈ ವಿಚಾರದಲ್ಲಿ ನಮ್ಮ ನಿರೂಪಣೆ ನಮ್ಮ ಸ್ಪಷ್ಟವಾದ ನಿಲುವು ಏನು ಎಂಬುದನ್ನು ಈ ಸದನದಲ್ಲಿ ಹೇಳತಕ್ಕಂಥದ್ದು ನಮ್ಮ ಕರ್ತವ್ಯವಿದೆ. ಆದ್ದರಿಂದ ಈ ಬಗ್ಗೆ.....

ಶ್ರೀ ರಾಮಕೃಷ್ಣ ಹೆಗಡೆ.—ಸನ್‌ಮಾನ್ಯ ಸಭಾಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ನಾಯಕರು ಪರಂಪರೆಯ ವಿಚಾರವಾಗಿ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಅನಂತರ ನಾನು ಮಾತನಾಡುತ್ತೇನೆ. ಇಂದು ಮುಂಜಾನೆ ನಾನು ಮಾನ್ಯ ವಿರೋಧಪಕ್ಷದ ನಾಯಕರನ್ನೂ ಮತ್ತು ಅವರ ಸಹೋದ್ಯೋಗಿಗಳನ್ನು ಕರೆಸಿ ಈ ವಿಚಾರವನ್ನು ಪ್ರಸ್ತಾಪ ಮಾಡಿದೆ. ತುಂಬ ಸಂತೋಷದಿಂದ ಅವರು ನಾನು ಹೇಳಿದಂಥ ಈ ಒಂದು ಸೂಚನೆಯನ್ನು ಅಂಗೀಕಾರ ಮಾಡಿದರು. ತಾಂತ್ರಿಕವಾಗಿ ತೊಂದರೆ ಇರಬಹುದು. ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಈ ಸದನದಲ್ಲಿ ಸ್ವಲ್ಪ ಕಾಲದಲ್ಲಿ ಮೊದಲನೆ ಸೂಚನೆ ಶ್ರೀಮಾನ ಡಿ.ಬಿ. ಚಂದ್ರೇಗೌಡರು ಎಂದು ಹೇಳಿ ಬಂದುದರಿಂದಲೂ ಎರಡನೆಯ ಪ್ರಶ್ನೆ ಬರತಕ್ಕಂಥದ್ದು ಅನಗತ್ಯವಾಗಿರುತ್ತದೆ. ಈ ಸೂಚನೆ ಬಂದಮೇಲೆ ಎದುರುಗಡೆ ಕುಳಿತಿರತಕ್ಕಂಥ ಎಲ್ಲ ಸದಸ್ಯರು ತಮ್ಮ ಬೆಂಬಲವನ್ನು ಸೂಚಿಸಿರುವುದರಿಂದ ಈ ಸೂಚನೆಯು ಸರ್ವಾನುಮತ ಸೂಚನೆ ಆದಂತೆ ಆಗುತ್ತದೆ.

ಅಧ್ಯಕ್ಷರು.—ವಿರೋಧಪಕ್ಷದ ನಾಯಕರಿಗೆ ಸಭೆಯ ನಾಯಕರು ಹೇಳಿದಂಥ ವಿಷಯ ಒಪ್ಪಿಗೆಯಾದಂತೆ ಆಗಿರುತ್ತದೆಂದು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಈ ಸದನದ ಕಾರ್ಯಕಲಾಪಗಳು ಕಾರ್ಯರೂಪಕ್ಕೆ ಬರತಕ್ಕಂಥದ್ದು ನಿಮ್ಮ ಕೈಯಲ್ಲಿದೆ. ಈ ಪ್ರಸ್ತಾಪವನ್ನು ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ಸಭೆಯ ಮುಂದೆ ಮಂಡಿಸುತ್ತಾರೆ. ಮಾನ್ಯ ಜಾಲಪ್ಪನವರು ಇದನ್ನು ಅನುಮೋದಿಸುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್.—ಸನ್‌ಮಾನ್ಯ ಸಭಾಧ್ಯಕ್ಷರೇ ಶ್ರೀ ಡಿ ಬಿ. ಚಂದ್ರೇಗೌಡರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂಬ ಮಸೂದೆಯನ್ನು ಈ ಮನೆಯಲ್ಲಿ ಮಂಡಿಸತಕ್ಕಂಥ ಕಾಲದಲ್ಲಿ, ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸುವ ಮುಖಾಂತರ ಪೆಟ್ಟಿನ ಒಂದು ಸತ್‌ಸಂಪ್ರದಾಯವನ್ನು ಸ್ಥಾಪನೆ ಮಾಡಬೇಕೆಂಬ ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ.

ಸ್ವಾಮಿ, ಈ ಕೆಳಗೆ ಕಂಡ ವಿಷಯವನ್ನು ಸೂಚಿಸುತ್ತೇನೆ.—

ಶ್ರೀ ಡಿ. ಬಿ. ಚಂದ್ರೇಗೌಡ ಅವರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು.

ಶ್ರೀ ಆರ್. ಎಲ್. ಜಾಲಪ್ಪ.—ಸನ್‌ಮಾನ್ಯ ಅಧ್ಯಕ್ಷರೇ ಮಾನ್ಯ ಜೆ. ಎಚ್. ಪಟೇಲ್‌ರವರ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.

(ಪ್ರಸ್ತಾವನೆಯನ್ನು ಸೂಚಿಸಲಾಯಿತು)

ಅಧ್ಯಕ್ಷರು.—ಈಗ ಪ್ರಸ್ತಾವನೆ ಏನೆಂದರೆ.

ಮಾನ್ಯ ಡಿ. ಬಿ. ಚಂದ್ರೇಗೌಡರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು.

(ಪ್ರಸ್ತಾವನೆಯು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು)

ಅಧ್ಯಕ್ಷರು.—ಈ ಪ್ರಸ್ತಾವನೆಯು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿದೆ. ಆದ್ದರಿಂದ ಮತ್ತೊಂದು ಪ್ರಸ್ತಾವನೆಯನ್ನು ಮತಕ್ಕೆ ಹಾಕಬೇಕಾಗಿಲ್ಲ ಈಗ ಶ್ರೀಮಾನ್ ಡಿ ಬಿ. ಚಂದ್ರೇಗೌಡರನ್ನು ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಗಿದೆ. ಶ್ರೀ ಡಿ. ಬಿ. ಚಂದ್ರೇಗೌಡ ಅವರನ್ನು ಸೂಚಕರಾದ ಶ್ರೀ ಜೆ. ಹೆಚ್. ಪಟೇಲರು ಹಾಗೂ ಅನುಮೋದಕರಾದ ಶ್ರೀ ಆರ್. ಎಲ್, ಜಾಲಪ್ಪನವರು ಅಧ್ಯಕ್ಷ ಪೀಠಕ್ಕೆ ಕರೆತರಬೇಕೆಂದು ಕೋರುತ್ತೇನೆ.

(ಶ್ರೀ ಜೆ. ಹೆಚ್. ಪಟೇಲ್ ಮತ್ತು ಶ್ರೀ ಆರ್. ಎಲ್. ಜಾಲಪ್ಪ ಅವರು

ಶ್ರೀ ಡಿ. ಬಿ. ಚಂದ್ರೇಗೌಡ ಅವರನ್ನು ಅಧ್ಯಕ್ಷ ಪೀಠಕ್ಕೆ ಕರೆದುಕೊಂಡು ಬಂದರು)

(ಮಾನ್ಯ ಅಧ್ಯಕ್ಷರಿಗೆ ಹಸ್ತಲಾಘವವನ್ನು ಕೊಟ್ಟನಂತರ ತಾತ್ಕಾಲಿಕ ಅಧ್ಯಕ್ಷರು ಅವರಿಗೆ ಪೀಠವನ್ನು ಬಿಟ್ಟುಕೊಟ್ಟರು)

ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದರು).